# ಭಾರತಕ್ಕೆ ವಿರಾಟ್ ಋತು



ವಿರಾಟ್ ಕೊಹ್ಲಿ

ಈ ಸಲದ ಟೆಸ್ಟ್ ಋತುವು ಆಲ್‌ರೌಂಡರ್‌ಗಳಿಗೆ ಸುಗ್ಗಿ ಕಾಲವಾಗಿತ್ತು. ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಜಯಂತ್ ಯಾದವ್ ಈ ಅವಧಿಯಲ್ಲಿ ಮಿಂಚಿದ ಪ್ರಮುಖರು. ಅದರಲ್ಲೂ ಅಶ್ವಿನ್ ಮತ್ತು ಜಡೇಜ ಐಸಿಸಿ ಬೌಲರ್ ಮತ್ತು ಆಲ್‌ರೌಂಡರ್‌ಗಳ ಪಟ್ಟಿಯ ಅಗ್ರಸ್ಥಾನದಲ್ಲಿ ತಮ್ಮನ್ನು ಗಟ್ಟಿಗೊಳಿಸಿಕೊಂಡಿದ್ದು ವಿಶೇಷ.

■ ಗಿರೀಶ ದೊಡ್ಡಮನಿ

ತವರು ನೆಲದಲ್ಲಿ ಸುದೀರ್ಘವಾದ ಕ್ರಿಕೆಟ್ ಋತುವಿಗೆ ಅಭೂತಪೂರ್ವ ಜಯದ ತೆರೆ ಬಿದ್ದಿದೆ. ಏಳು ತಿಂಗಳುಗಳ ಕಾಲ ನಿರಂತರವಾಗಿ ಉಕ್ಕಿದ ಕ್ರಿಕೆಟ್ ಸಾಗರದಲ್ಲಿ ಭಾರತ ತಂಡದ ಹಡಗನ್ನು ನಾವಿಕ ವಿರಾಟ್ ಕೊಹ್ಲಿ ಯಶಸ್ವಿಯಾಗಿ ದಡ ಮುಟ್ಟಿಸಿದ್ದಾರೆ.

ಈ ದೀರ್ಘ ಋತುವಿನಲ್ಲಿ ಹತ್ತು ಹಲವು ದಾಖಲೆಗಳು, ವಿವಾದಗಳು, ಹೊಸ ಮುಖಗಳ ಸಾಧನೆಗಳು ಕ್ರಿಕೆಟ್ ಇತಿಹಾಸದ ಪುಟಗಳಲ್ಲಿ ದಾಖಲಾದವು. ಒಟ್ಟು 13 ಟೆಸ್ಟ್‌ಗಳಲ್ಲಿ ಹತ್ತು ವಿಜಯಗಳನ್ನು ದಾಖಲಿಸಿ, ಎರಡರಲ್ಲಿ ಡ್ರಾ ಸಾಧಿಸಿದ ಕೊಹ್ಲಿ ಬಳಗವು ಸೋತಿದ್ದು ಒಂದು ಪಂದ್ಯದಲ್ಲಿ ಮಾತ್ರ.

ಈ ಅಂಕಿ ಸಂಖ್ಯೆಗಳನ್ನು ಬದಿಗಿಟ್ಟು ಈ ಋತುವನ್ನು ಭಾರತ ಕ್ರಿಕೆಟ್ ಬೆಳವಣಿಗೆಯ ಹೊಸ ಭರವಸೆಯ ಭಾಗವಾಗಿಯೂ ನೋಡಬಹುದು. ಈ ಬಾರಿ ಬಾಂಗ್ಲಾ ದೇಶ ಎದುರಿನ ಏಕೈಕ ಟೆಸ್ಟ್‌ನ ಸರಣಿ ಹೊರತುಪಡಿಸಿದರೆ ಭಾರತವು ಎದುರಿಸಿದ ಉಳಿದ ತಂಡಗಳು ಬಲಿಷ್ಠವಾಗಿದ್ದವು. ಅದರಲ್ಲೂ ಭಾರತದ ನೆಲದಲ್ಲಿ ತಮ್ಮ ಹೆಜ್ಜೆಗುರುತು ಮತ್ತು ವಿಜಯದ ಛಾಪು ಮೂಡಿಸುವ ಹೆಬ್ಬಯಕೆಯ ತಂಡಗಳೇ ಆಗಿದ್ದವು.

ಆದರೆ, ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಇತ್ತೀಚೆಗೆ ಆಸ್ಟ್ರೇಲಿಯಾ ತಂಡಗಳನ್ನು ಮಣಿಸಿ ಕಳಿಸುವಲ್ಲಿ ಆತಿಥೇಯ ಯುವಪಡೆಯು ಸಫಲವಾಗಿದೆ. ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್. ವಿ.ವಿ.ಎಸ್.ಲಕ್ಷ್ಮಣ್, ವೀರೇಂದ್ರ ಸೆಹ್ವಾಗ್, ಮಹೇಂದ್ರಸಿಂಗ್ ದೋನಿ, ಹರಭಜನ್ ಸಿಂಗ್, ಜಹೀರ್ ಖಾನ್ ಅವರಂತಹ ತಾರೆಯರ ಸ್ಥಾನ ತುಂಬುವ ಪ್ರತಿಭಾವಂತರು ಬೆಳಕಿಗೆ ಬಂದ ಅವಧಿ ಇದು. ಅದರಲ್ಲೂ ಆಸ್ಟ್ರೇಲಿಯಾ ಎದುರಿನ ಅತ್ಯಂತ ಪೈಪೋಟಿಯುತ ಸರಣಿಯಲ್ಲಿ ಭಾರತದ ಆಟಗಾರರು ಆಡಿದ ರೀತಿಯು ಅಮೋಘವಾದದ್ದು. ಎಲ್ಲಕ್ಕಿಂತ ಹೆಚ್ಚಾಗಿ ವಿದೇಶಗಳಲ್ಲಿಯೂ ತಂಡವು ಗೆಲುವು ಸಾಧಿಸುವ ಕನಸು ಕಾಣುವಂತಹ ಆತ್ಮವಿಶ್ವಾಸ ತುಂಬಿದ ಸರಣಿ ಇದಾಯಿತು.

## ಗಂಗೆಯ ತಟದಿಂದ ಹಿಮದಂಗಳದವರೆಗೆ

2014ರ ಡಿಸೆಂಬರ್‌ನಲ್ಲಿ ಮಹೇಂದ್ರಸಿಂಗ್ ದೋನಿ ಟೆಸ್ಟ್ ತಂಡದ ನಾಯಕತ್ವಕ್ಕೆ ವಿದಾಯ ಹೇಳಿದ ಮೇಲೆ ಕೊಹ್ಲಿ ಹೆಗಲ ಮೇಲೆ ತಂಡದ ಹೊಣೆ ಬಿತ್ತು. ಯುವ ಅಟಗಾರರನ್ನು ಬೆನ್ನಿಗೆ ಕಟ್ಟಿಕೊಂಡು ದೆಹಲಿ ಆಟಗಾರ ತಮ್ಮ ವಿಜಯಯಾತ್ರೆಯ ಕನಸು ಹೆಣೆದರು. 2015ರಲ್ಲಿ ಇಲ್ಲಿಗೆ ಬಂದಿದ್ದ ಅಗ್ರಶ್ರೇಯಾಂಕದ ದಕ್ಷಿಣ ಆಫ್ರಿಕಾ ತಂಡಕ್ಕೂ ಸೋಲಿನ ಮುಖ ತೋರಿಸಿದರು. ನಂತರ ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳನ್ನು ಅವರ ನೆಲದಲ್ಲಿಯೇ

